Abolition of Profession Tax.

234. SRI P. RAMDEV (Malleswaram). —Will the Minister for Finance and Planning be pleased to state.—

(a) whether representation have been received to abolish the profession tax ;

(b) from whom these representations have been received ;

(c) the action taken by the Government on the basis of representation ?

SRI M. VEERAPPA MOILY (Minister for Finance and plannings).—

(a) Yes.

(b) Representations have been received from the following institutions.

1. The Employees of all India Telegraph Engineering Institutions Mysore.

2. The Chitradurga District Bank Employees Association.

3 The Employees of the Central, State Government, public and other Employees.

4. Agencies Life Insurance Institutions and their Agents.

(c) Representations have been examined and those who have given reprseeentations have been informed as follows concerned.

Government does't desiers to abolish profession tax. But even then the Government is ready to consider sympathetically to reduce the rate of tax or to exempt from payment of tax in case of certain people who are engaged in certain professions taking into consideration their difficulties.

ಶ್ರೀ ಪಿ. ರಾಮ್‌ದೇವ್. ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ಕೋರಿ ವಿವಿಧ ವರ್ಗದ ಜನರಿಂದ ಮನವಿಗಳು ಸರ್ಕಾರಕ್ಕೆ ಬಂದಿರುವುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುವುದೆಂದು ತಾವು ಹೇಳಿದ್ದೀರಿ. ಇದು ಈಗ ಯಾವ ಹಂತದಲ್ಲಿದೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಂ. ವೀರಪ್ಪ ಮೊಯಿಲಿ.—ವೃತ್ತಿ ತೆರಿಗೆಯನ್ನು ರದ್ದು ಮಾಡಬೇಕೆಂದು ಕೋರಿ ಅನೇಕ ವರ್ಗದ ಜನರಿಂದ ಮನವಿಗಳು ಸರ್ಕಾರಕ್ಕೆ ಬಂದಿರುವುದು ನಿಜ. ಆ ಬಗ್ಗೆ ಪರಿಶೀಲಿಸಿ ಸಾಕಷ್ಟು ಜನರಿಗೆ ರಿಯಾಯಿತಿಯನ್ನೂ ಕೊಟ್ಟಿದ್ದೇವೆ ಕಳೆದ ವಾರ ಕೂಡ ಲೈಫ್ ಇನ್‌ಷೂರೆನ್ಸ್ ಕಾರ್ಪೋರೇಷನ್ ಅಧಿಕಾರಿಗಳಿಂದ ಮನವಿಗಳು ಬಂದಿವೆ. ಆದರೆ ಯಾವ ಯಾವ ಮನವಿದಾರರಿಗೆ ಯಾವ ಯಾವ ತರೀಕಿನಿಂದ ರಿಯಾಯಿತಿಯನ್ನು ಕೊಡಲಾಗಿದೆ ಎಂಬುದನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. But Government has got an open mind. ಯಾರ ಮನವಿಯನ್ನೂ ನಾವು ಸ್ವೀಕಾರ ಮಾಡುವುದಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. If the hon. Member can convince me that certain categories of employees deserve to be given exemption of Professional Tax, Government can always consider it ; we have an open mind.

ಶ್ರೀ ಪಿ. ರಾಮದೇವ್.—೧೯೭೬ರಲ್ಲಿ ಏನು ಈ ಕಾಯಿದೆ ಮಾಡಿದ್ದೀರಿ ಈ ನಾಲ್ಕು ವರ್ಷಗಳು ಮುಗಿಯುತ್ತಾ ಬಂದಿದೆ ರೂಪಾಯಿನ ಮೌಲ್ಯಗಳು ಕಡಿಮೆಯಾಗುತ್ತಾ ಬಂದಿರುವ ಕಾರಣ ಮೊದಲು ಏನು ಮಿನಿಮಮ್ ೬ ನೂರು ಎಂದು ಮಾಡಿದ್ದೀರಿ ಅದನ್ನು ಈಗ ಹೆಚ್ಚಿಗೆ ಮಾಡಲು ಸಾಧ್ಯವೆ ? ಕನಿಷ್ಟ ಒಂದುಸಾವಿರ ರೂಪಾಯಿವರೆಗೆ ರಿಯಾಯಿತಿ ಕೊಡಲಿಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರದ ಮಟ್ಟಿಗೆ ಹೇಳುವುದಾದರೆ ಈಗ ಯಾವ ಒಂದು ಮಿತಿಯನ್ನು ಇಟ್ಟಿದ್ದೇವೆ ಅದು ಸಾಕಷ್ಟು ಅಪಕಾರಗಳನ್ನು ಕೊಟ್ಟು ಮತ್ತು ಕೆಳಗಿನ ವರ್ಗದ ಜನರಿಗೆ ಅನುಕೂಲವಾಗಲೆಂದು ಮಾಡಿದ್ದೇವೆ ಇನ್ನು ಅದಕ್ಕಿಂತ ಹೆಚ್ಚು ಮಾಡಿದರೆ ನಮ್ಮ ಸರ್ಕಾರ ಏನು ಅಭಿವೃದ್ಧಿ ಯೋಜನೆಗಳನ್ನು ಮಾಡಬೇಕೋ ಅದನ್ನು ಮಾಡಲು ಸಾಕಷ್ಟು ಹಣವಿಲ್ಲದ ನಮ್ಮ ಉದ್ದೇಶಕ್ಕೆ ಭಂಗ ಬರಬಹುದು ಆದ್ದರಿಂದ ಮಿತಿಯನ್ನು ಹೆಚ್ಚು ಮಾಡುವ ಯೋಚನೆ ಸರ್ಕಾರದ ಪರಿಗಣನೆಯಲ್ಲಿ ಇಲ್ಲ.

ಶ್ರೀ ಪಿ. ರಾಮದೇವ್.—ತಾವು ಹೇಳಿದಿರಿ, ಕೆಲವರಿಗೆ ರಿಯಾಯಿತಿ ಕೊಟ್ಟಿದ್ದೇವೆಂದು. ಆದರಲ್ಲಿ ಮಂತ್ರಿಗಳಿಗೆ ಹಾಗೂ ಶಾಸಕರಿಗೆ ಕೊಟ್ಟಿದ್ದೀರಾ ? ಆದರಲ್ಲಿ ಎಷ್ಟು ಜನರು ಈ ತೆರಿಗೆಯನ್ನು ಕೊಡುತ್ತಿದ್ದಾರೆ ಹೇಳಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಸರ್ಕಾರದ ಒಂದು ನೋಟಿಫಿಕೇಷನ್ ಪ್ರಕಾರ ವಿಧಾನಸಭೆ ಮತ್ತು ಪರಿಷತ್ತಿನ ಸದಸ್ಯರು, ಸ್ಪೀಕರ್ ಡೆಪ್ಯುಟಿ ಸ್ಪೀಕರ್ ಹಾಗೂ ಪರಿಷತ್ತಿನ ಅಧ್ಯಕ್ಷರು ಮತ್ತು ಪರಿಷತ್ತಿನ ಉಪಾಧ್ಯಕ್ಷರು ಇವರನ್ನು ಬಿಟ್ಟು ಉಳಿದವರೆಲ್ಲರೂ ಕೊಟ್ಟಿದ್ದೀವಿ.

ಶ್ರೀ ಪಿ. ರಾಮದೇವ್.—ತಾವು ತೆರಿಗೆ ಕೊಡುತ್ತೀರಾ ? ಈಗ ತಾವು ಆಕ್ಟ್ಯಿ ಮತ್ತು ಸಾರಿಗೆ ಸಂಸ್ಥೆಗಳ ಮಾಲೀಕರು ಹಾಗೂ ವ್ಯಾಪಾರಸ್ಥರ ಒತ್ತಡಕ್ಕಾಗಿ ಸುಮಾರು ೨೬ ಕೋಟಿ ರೂಪಾಯಿ ಮನ್ನಾ ಮಾಡಿದ್ದೀರಿ. ಆದರೆ ಅವೇ ಈ ವೃತ್ತಿ ತೆರಿಗೆಯಿಂದ ಕೇವಲ ೬ ಕೋಟಿ ರೂಪಾಯಿ ಬರಬಹುದು ಇದನ್ನು ಮನ್ನಾ ಮಾಡುವುದಕ್ಕೆ ಸರ್ಕಾರಕ್ಕೆ ಏತಕ್ಕೆ ಮನಸ್ಸು ಬರುವುದಿಲ್ಲವೋ ? ಇದರಿಂದ ಬಹಳಷ್ಟು ಜನರಿಗೆ ಕಿರುಕುಳವಾಗುತ್ತಿದೆ ಎಂದು ಎಲ್ಲರೂ ಮನವಿಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಆಕ್ಟ್ಯಿ ರದ್ದು ಮಾಡಿದ್ದೀರಿ ಅದೇ ರೀತಿ ಇದನ್ನು ಏತಕ್ಕೆ ರದ್ದು ಮಾಡಬಾರದು ?

ಶ್ರೀ ಎಂ ವೀರಪ್ಪ ಮೊಯಿಲಿ —ಅಧ್ಯಕ್ಷರೇ ಇದು ಬಹಳ ಒಳ್ಳೆಯ ಸೂಚನೆ ಆದರೆ ನಾವು ಕೂಡ ತೆರಿಗೆಯಿಲ್ಲದೆ ಧಾರಾಳವಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗಬೇಕೆನ್ನುವುದು ನಮ್ಮ ಇಚ್ಛೆ. ಆದರೆ ಸರ್ಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಅದಕ್ಕೆ ಈ ರೀತಿ ಒಂದೊಂದು ಬಾಬಿನಲ್ಲಿಯೂ ೫–೬ ಕೋಟಿ ರೂಪಾಯಿಗಳನ್ನು ರಿಯಾಯಿತಿ ಕೊಡುತ್ತಾ ಹೋದರೆ, ಯಾವ ಯೋಜನೆಗಳನ್ನು ಪೂರೈಸುವುದಕ್ಕಾಗುವುದಿಲ್ಲ. ಆದ್ದರಿದ ಸರ್ಕಾರದ ಮತ್ತು ದೇಶದ ಹಿತದೃಷ್ಟಿಯನ್ನು ಕಾಪಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್. ಶಿವಪ್ಪ.—ಈ ವೃತ್ತಿ ತೆರಿಗೆ ರಿಯಾಯಿತಿಯ ಬಗ್ಗೆ ಅಡ್ವೊಕೇಟ್ ಅಸೋಸಿಯೇಷನ್ ನವರು ಅರ್ಜಿ ಕೊಟ್ಟಿದ್ದಾರೆ ಅದಕ್ಕೆ ಏನಾದರೂ ರಿಯಾಯಿತಿ ಕೊಡುವ ಯೋಚನೆ ಮಾಡಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ನೋಟಿಫಿಕೇಷನ್ ೦೨–೭–೭೭ರ ಪ್ರಕಾರ ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್ ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗಳ ವಿಚಾರದಲ್ಲಿ ಈಗಾಗಲೇ ರಿಯಾಯಿತಿ ಕೊಟ್ಟಿದ್ದೇವೆ. ಇನ್ನು ಜಾಸ್ತಿ ಕೊಡಬೇಕೆಂದು ಕೇಳುತ್ತಿದ್ದಾರೆ ಆದರೆ ಅವರು ವೈಯಕ್ತಿಕವಾಗಿ ಯಾರಿಗೆ ತೊಂದರೆಯಾಗಿದೆ ಎನ್ನುವುದನ್ನು ನೋಡಿ ಅದನ್ನು ಗಣನೆಗೆ ತೆಗೆದುಕೊಂಡು ರಿಯಾಯಿತಿ ಕೊಡುತ್ತೇವೆ.

SRI A. LAKSHMI SAGAR.—Since it relates to the provisions of tax connected with lawyers, may I ask, having regard to the schedule of rates fixed for the advocates *v s-a-vis* the fixed salaried employees of the state owned enterprises, private enterprises and government salaried persons, whether it is not a fact that the rate fixed for lawyers is most unreasonable and it has no re ation whatever, with the income that a lawyer is supposed to have earned? Though I admit

that the profession tax is not based on the capacity of a person in a profession, it must have some relation with one's income there appears to be no such principle involved in fixing the slab for the payment of profession tax. Will the Government kindly look into it and see that some reasonable slab is prescribed for lawyers having relation to their income ?

SRI M. VEERAPPA MOILY.—Mr. Speaker, the slab is fixed according to the service put in by an advocate and not according to the income earned by him. Anyway, there is a lot of foree in what our hon. Member pleads that is, to further rationalise the slabs, for payment of profession Tax.

ಶ್ರೀಮತಿ ಎಸ್. ಪ್ರಮಿಳಾ.—ಮಾನ್ಯ ಮಂತ್ರಿಗಳಲ್ಲಿ ಹೇಳುವುದೇನೆಂದರೆ ಲಾಯರ್‌ಗಳಿಗೆ ನಿಗಧಿಮಾಡುವಾಗ ಅವರು ಎಷ್ಟು ವರ್ಷಗಳಿಂದ ಪ್ರಾಕ್ಟೀಸ್ ಮಾಡುತ್ತಿದ್ದಾರೆ ಎನ್ನುವ ಆಧಾರದ ಮೇಲೆ ನಿಗಧಿ ಮಾಡಿದ್ದಾರೆ. ಇತ್ತೀಚೆಗೆ ಲ್ಯಾಂಡ್ ರೀ ಫಾರವೆಸ್ಟ್ ಆಕ್ಟ್ ಮತ್ತು ಕೋ ಆಪರೇಟೀವ್ ಆಕ್ಟ್‌ನಲ್ಲಿ ಈ ಮೇಲ್ಕಂಡ ಕೆ ಸುಗಳಲ್ಲಿ ವಕೀಲರು ಅಪಿಯರ್ ಆಗಬಾರದು ಎಂದು ಮಾಡಿರುವುದರಿಂದ ಸುಮಾರು ವಕೀಲರಿಗೆ ಕೆಲಸವಿಲ್ಲವೆ ಇದ್ದಾರೆ. ಆದ್ದರಿಂದ ಈ ತೆರಿಗೆಯನ್ನು ಏತಕ್ಕೆ ತೆಗೆದು ಹಾಕ ಬಾರದು. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಂ. ವೀರಪ್ಪ ಮೋಯಿಲಿ.—ಅಂತಹವರ ಬಗ್ಗೆ ರಿಯಾಯಿತಿ ಕಡಿಮೆ ಮಾಡಬಹುದು.

Elections to Municipalities in the State.

254 SRI M. C. BASAPPA (Chamarajanagar)—Will the Minister for Housing and Urban Development be pleased to state.

(a) whether it has come to notice of the Government that elections are over due for most of the municipalities in the State ;

(b) if so, the time fixed to complete elections in such places ?

SRI DHARAM SINGH. (Minister for Housing and Urban Development)—

(a) Out of 230 Municipalities in the State, elections have been held for 136. Elections are yet to be held for 94 Municipalities and 4 Corporations.

(b) By the end of 1980

ಶ್ರೀ ಎಂ. ಸಿ. ಬಸಪ್ಪ.—ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದು ಬಹಳ ವರ್ಷಗಳಾಗಿವೆ ಸುಮಾರು ೩-೪ ವರ್ಷಗಳಿಂದ ಅಡ್ಮಿನಿಸ್ಟ್ರೇಟರ್ಸ್‌ಗಳನ್ನು ನೇಮಿಸಿ ಅವರ ಆಡಳಿತವನ್ನು ನಡೆಸಿಕೊಂಡು ಬರುತ್ತಿದ್ದೀರಿ ? ಸರ್ಕಾರಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳು ಇದ್ದರೆ ಒಳ್ಳೆಯ ಕೆಲಸ ಕಾರ್ಯಗಳು ನಡೆಯುತ್ತವೆ ಎನ್ನುವ ನಂಬಿಕೆ ಇಲ್ಲವೆ? ಇದ್ದರೆ ಏತಕ್ಕೆ ಈ ಅನಾದರಣೆ ಸ್ವಾಮಿ ?

† ಧರಂಸಿಂಗ್.(ನಗರಾಡಳಿತ ಸಚಿವರು)—ಈಗಾಗಲೇ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ಮಾಡಬೇಕೆಂದು ಈ ವಿಚಾರವನ್ನು ವಿಧಾನ ಸಭೆಯಲ್ಲಿಯೂ ಹಾಗೂ ವಿಧಾನ ಪರಿಷತ್ತಿನಲ್ಲಿಯೂ ಸರ್ಕಾರದ ನೀತಿಯನ್ನು ಪ್ರಕಟಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಚುನಾವಣೆ ನಡೆಸುವ ಹಾಗೆ ಆಡಳಿತವನ್ನು ನಡೆಸಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ ಸರ್ಕಾರದ ದೋರಣೆಯೂ ಅಲ್ಲ ಇದರ ಬಗ್ಗೆ ಕಾರ್ಯಕ್ರಮ ತೆಗೆದು ಕೊಂಡಿದ್ದೇವೆ ಚುನಾವಣೆ ಮಾಡುತ್ತೇವೆ.